**ಕರ್ನಾಟಕ ಸರ್ಕಾರ**

**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**

**ಬೆಂಗಳೂರು**

**ಸಂಖ್ಯೆ: ಇಡಿ/ಕೆಇಎ/ಆಡಳಿತ/ಜಿಎನ್ಎಮ್/2018** **ದಿನಾಂಕ: 27-10-2018**

**ಸಿಇಟಿ-2018 – ಬಿ.ಎಸ್.ಸಿ., ಬಿ.ಪಿ.ಟಿ., ಬಿ.ಪಿ.ಒ. ಕೋರ್ಸುಗಳ ಪ್ರವೇಶಕ್ಕಾಗಿ ಎರಡನೇ ಹಾಗು ಅಂತಿಮ ಸುತ್ತಿನ ಸೀಟು ಹಂಚಿಕೆ ಇಚ್ಛೆ / ಆಯ್ಕೆ ದಾಖಲಿಸಲು ವೇಳಾಪಟ್ಟಿ**

ಮೊದಲನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ / ಹೊಸದಾಗಿ ಸೇರಲ್ಪಟ್ಟ / ಉಳಿದಿರುವ / ಬಿ.ಎಸ್.ಸಿ., ಬಿ.ಪಿ.ಟಿ., ಬಿ.ಪಿ.ಒ. *ಕೋರ್ಸುಗಳ ಸೀಟುಗಳು ಇದ್ದರೆ ಅಂತಹ ಸೀಟುಗಳನ್ನು ಎರಡನೇ ಸುತ್ತಿನಲ್ಲಿ ಸೀಟುಗಳ ಹಂಚಿಕೆ ಯನ್ನು* ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಎಲ್ಲಾ ಅರ್ಹ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ (ಹೊಸದಾಗಿ ದಾಖಲಾತಿ ಪರಿಶೀಲನೆಯನ್ನು ಮಾಡುವವರೂ ಸೇರಿದಂತೆ)

**ಸೂಚನೆ:**

ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಅನ್ನು ದಾಖಲಿಸಲು ಅವಕಾಶ ಕಲ್ಪಿಸಿದೆ. (Fresh Option Entry – Add / Delete / Modify / Re-order)

ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಅಥವಾ ಮೊದಲ ಸುತ್ತಿನಲ್ಲಿ ಹಂಚಿಕೆಯಾದ ಸೀಟುಗಳೇ ಎರಡನೇ ಸುತ್ತಿನಲ್ಲಿಯೂ ಹಂಚಿಕೆಯಾಗಿದ್ದರೆ, ಅಭ್ಯರ್ಥಿಗಳು ಕಡ್ಡಾಯವಾಗಿ ಕಾಲೇಜಿಗೆ ಪ್ರವೇಶ ಪಡೆಯಬೇಕು ಮತ್ತು ಸೀಟು ಹಂಚಿಕೆಯ ಬಗ್ಗೆ ಬೇರೆ ಯಾವುದೇ ಇತರೆ ಛಾಯ್ಸ್ ಇರುವುದಿಲ್ಲ.

ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ (ಪಾವತಿಸಿದೇ ಇದ್ದಲ್ಲಿ) ನಿಗದಿತ ಕೊನೆಯ ದಿನಾಂಕದೊಳಗೆ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.

**ದಾಖಲಾತಿ ಪರಿಶೀಲನೆ ಮತ್ತೊಂದು ಅವಕಾಶ**

ಬಿ.ಎಸ್.ಸಿ., ಬಿ.ಪಿ.ಟಿ., ಬಿ.ಪಿ.ಒ. ಕೋರ್ಸುಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ದಾಖಲಾತಿ ಪರಿಶೀಲನೆಗೆ ಇಲ್ಲಿಯವರೆಗೆ ಹಾಜರಾಗದೇ ಇರುವ ಅಭ್ಯರ್ಥಿಗಳು ದಿನಾಂಕ 03-11-2018 ರಂದು ಬೆ. 11.00 ರಿಂದ ಮ.1.00 ರ ಅವಧಿಯಲ್ಲಿ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಾಖಲಾತಿ ಪರಿಶೀಲನೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು ಕೇಂದ್ರದಲ್ಲಿ ಮಾತ್ರ ಹಾಜರಾಗಬಹುದಾಗಿದೆ. ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಳ್ಳುವವರು ಮಾತ್ರ ಎರಡನೇ ಸುತ್ತಿನ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆಯುತ್ತಾರೆ.

ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಎರಡನೇ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿ – 2018

| ಕ್ರ. ಸಂ. | ವಿವರಗಳು | **ದಿನಾಂಕ / ಸಮಯ** |
|---|---|---|
| 01 | Display of Available Seats<br>ಲಭ್ಯವಿರುವ ಸೀಟ್‌ಗಳ ಪ್ರಕಟಣೆ | 02-11-2018 ಮ. 2.30 ರ ನಂತರ |
| 02 | Document Verification<br>ದಾಖಲಾತಿ ಪರಿಶೀಲನೆ | 03-11-2018 ಬೆ. 11.00 ರಿಂದ ಮ.1.00 |
| 03 | Option Entry by eligible candidates (in the order of preference)<br>ಇಚ್ಛೆ / ಆಯ್ಕೆಗಳನ್ನು ದಾಖಲಿಸುವುದು. (ಆದ್ಯತಾ ಕ್ರಮದಲ್ಲಿ) | ದಿನಾಂಕ 03-11-2018 ಮ. 3.30 ರಿಂದ 12-11-2018 ಬೆಳಿಗ್ಗೆ 11.00 ರ ವರೆಗೆ |
| 04 | Publication of Second Round Seat Allotment Result<br>ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆ | ದಿನಾಂಕ 12-11-2018 ಸಂ. 4.30 ರ ನಂತರ |
| 05 | Payment of Fees & downloading of Admission Orders<br>ಶುಲ್ಕ ಪಾವತಿ ಮಾಡುವುದು – ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಳ್ಳುವುದು | ದಿನಾಂಕ 13-11-2018 ರಿಂದ 14-11-2018 ರವರೆಗೆ |
| 06 | Last date for reporting to the allotted colleges.<br>ಕಾಲೇಜಿನಲ್ಲಿ ಪ್ರವೇಶ ಪಡೆಯಲು ಕೊನೆಯ ದಿನಾಂಕ | 15-11-2018 ರವರೆಗೆ |

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ.